



(6ನೇ ಪುಟದಿಂದ)

ಈ ಹಾರಿ ಬರುವ ಅತಿಥಿಗಳನ್ನು ಸ್ವಾಗತಿಸಲೆಂದೇ ಮೈಸೂರಿನ ಹೂತೋಟಗಳಲ್ಲಿ, ಉದ್ಯಾನವನಗಳಲ್ಲಿ ಸಹಸ್ರಾರು ಹೂವುಗಳು ಮಧುತುಂಬಿ ಕಾಯುತ್ತಿರುತ್ತವೆ. ಈ ಅತಿಥಿಗಳೆಂದರೆ ಜೇನ್ನೊಣಗಳು, ಚಿಟ್ಟೆ ಪತಂಗಗಳು, ದುಂಬಿ, ಹಾತೆ, ಮಿಡತೆಗಳು, ಪೀಟಿ ಹುಳುಗಳು... ಹೀಗೆ ನೂರೆಂಟು ಬಗೆಯವು. ಎಲ್ಲೆಲ್ಲಿಂದಲೋ ಮೈಸೂರಿಗೆ ಹಾರಿ ಬರುವ ಈ ಕೀಟಗಳು ದಸರಾ ಮುಗಿದ ಬಳಿಕವೂ ಇಲ್ಲೇ ನೆಲೆಸುವುದಿದೆ.

ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ದಸರಾ ಹೊತ್ತಿಗೇ ಹೂದೋಟದ ಸ್ಪರ್ಧೆಯೂ ನಡೆಯುತ್ತದೆ. ಇಲ್ಲಿನ ಉದ್ಯಾನಗಳಲ್ಲಿ, ಮನೆಗಳ ಮುಂದೆ, ಸರ್ಕಾರಿ ಕಛೇರಿಗಳ ಮುಂದೆ ಹೂಗಳನ್ನು ಬೆಳೆಸಿ, ಕುಂಡಗಳನ್ನು ಅಂದವಾಗಿ ಜೋಡಿಸಿ ಸ್ಪರ್ಧೆಗೆ ಇಡಲಾಗುತ್ತದೆ. ಜರ್ಬೆರಾ, ಸೇವಂತಿಗೆ, ಡೇಲಿಯಾ, ಆಂತೋರಿಯಂ, ಪೆಟೂನಿಯಾ, ಜೀನಿಯಾ, ಮೆರಿಗೋಲ್ಡ್, ಸಾಲ್ವಿಯಾ, ಆಸ್ಟರ್, ಅರೇಲಿಯ, ಗ್ಲಾಡಿಯೋಲಸ್– ನೂರೆಂಟು ಹೆಸರುಗಳು ಪುಷ್ಪಗಳಿಗೆ. ವರ್ಣರಂಜಿತ, ಸುಕೋಮಲ ಹೂರಾಶಿಗಳು ಸೊಬಗಿನಿಂದ ಅರಳಿ ನಿಂತು ಕೀಟಲೋಕವನ್ನು ದಸರೆಗೆ ಬರುವ ಅತಿಥಿಗಳನ್ನು ಬರಮಾಡಿ ಕೊಂಡಂತೆಯೇ ಸಂತಸದಿಂದ ಬರಮಾಡಿ ಕೊಳ್ಳುತ್ತವೆ.

ಮೈಸೂರಿನ ಕರ್ಜನ್ ಪಾರ್ಕ್, ಕುಕ್ಕರಹಳ್ಳಿ ಕೆರೆ, ಕಾರಂಜಿಕೆರೆ, ಅರಮನೆ ಮೈದಾನ, ವಿಶ್ವವಿದ್ಯಾಲಯ, ಡಿಸಿ ಆಫೀಸ್, ಜಿಲ್ಲಾ ಪಂಚಾಯ್ತಿ ಕಚೇರಿ, ಕಾಡಾ ಕಚೇರಿ, ಹೋಟೆಲುಗಳು, ಆಸ್ಪತ್ರೆಗಳು– ಹೀಗೆ ಎಲ್ಲೆಡೆಯಲ್ಲೂ ಹೂವಿನಾ ಲೋಕ! ಸಾಲಂಕೃತ ಊರಿನ ತುಂಬ ಸಹಸ್ರಾರು ಹೂಗಳ ಕಿನ್ನರಲೋಕವೇ ತೆರೆದುಕೊಳ್ಳುತ್ತದೆ.

ಮೈಸೂರಿನ ತೋಟಗಾರಿಕಾ ಸಂಘ ಮತ್ತು ತೋಟಗಾರಿಕಾ ಇಲಾಖೆ ಪ್ರತಿ ವರ್ಷವೂ ದಸರಾ ಫಲಪುಷ್ಪ ಪ್ರದರ್ಶನ ಏರ್ಪಡಿಸುತ್ತಾ ಬಂದಿದೆ. ಈಗ ಹೂಗಳು ಅರಳಿ ನಿಂತು ಕಂಪನ್ನು ಬೀರುತ್ತಿವೆ. ಮಧುವನ್ನು ಅರಸಿ ಬರುವ ಮಧುಕರರು ಈ ಹೂದೋಟಗಳಲ್ಲೇ ಬೀಡುಬಿಟ್ಟಿದ್ದಾರೆ.



